# ಪಾಠಾಧಾರಿತ(LBA) ಪ್ರಶ್ನೆ ಪತ್ರಿಕೆ 2026-27

**ಪಾಠ-: 1. ಇತಿಹಾಸದ ಪರಿಚಯ ಮತ್ತು ಆರಂಭಿಕ ಸಮಾಜ , 2. ಭಾರತ ನಮ್ಮ ಹೆಮ್ಮೆ**

**ತರಗತಿ: 6ನೇ ವಿಷಯ: ಸಮಾಜ ವಿಜ್ಞಾನ ಅಂಕಗಳು : 20 ಸಮಯ : 45 ನಿಮಿಷ**

---

**I. ಸೂಕ್ತ ಉತ್ತರ ಆರಿಸಿ ಬರೆಯಿರಿ (4 x 1 = 4)**

1. ಜಗತ್ತಿನಲ್ಲಿ ಅಹಿಂಸೆಯ ಶ್ರೇಷ್ಠತಮ ಪ್ರತಿಪಾದಕರು ಯಾರು?
   ಅ. ಗ್ರೀಕರು ಆ. ಭಾರತೀಯರು ಇ. ಪರ್ಷಿಯನ್ನರು ಈ. ಆಂಗ್ಲರು
2. ಇತಿಹಾಸದ ಪಿತಾಮಹ ಯಾರು?
   ಅ. ಆರ್ಯಭಟ ಆ. ಹೆರೋಡೋಟಸ್ ಇ. ಕೋಪರ್ನಿಕಸ್ ಈ. ಕಣಾದ
3. ಸೊನ್ನೆಯನ್ನು ಒಂದು ಸಂಖ್ಯಾ ಸೂಚಕವಾಗಿ ಬಳಸಿದ ಮೊದಲ ದೇಶ ಯಾವುದು?
   ಅ. ಭಾರತ ಆ. ಕಾಂಬೋಡಿಯಾ ಇ. ಚೀನಾ ಈ. ಗ್ರೀಸ್
4. ಜೀವ ವಿಕಾಸದ ಹಾದಿಯಲ್ಲಿ ಮೊದಲು ವಿಕಾಸವಾದ ಜೀವಿಗಳು ಯಾವುವು?
   ಅ. ಸಸ್ತನಿಗಳು ಆ. ಮೀನು ಇ. ಏಕಕೋಶ ಜೀವಿಗಳು ಈ. ಪಕ್ಷಿಗಳು

**II. ಹೊಂದಿಸಿ ಬರೆಯಿರಿ (4 x 1 = 4)**

5. ಪುರಾತತ್ವ ಆಧಾರಗಳು - ಅ. ಸಾ.ಶ. 2001 ರಿಂದ 2100
6. 21ನೇ ಶತಮಾನ - ಆ. ಬಳ್ಳಾರಿ ಸಮೀಪದ ಸಂಗನಕಲ್ಲು
7. ಬೆಂಕಿಯ ಪರಿಚಯ - ಇ. ಶಾಸನಗಳು
8. ಆಯುಧ ಉತ್ಪಾದನಾ ನೆಲೆ - ಈ. ಹಳೆಯ ಶಿಲಾಯುಗ

**III. ಒಂದು ವಾಕ್ಯದಲ್ಲಿ ಉತ್ತರಿಸಿ (2 x 1 = 2)**

9. ಇತಿಹಾಸ ಎಂದರೇನು?
10. ಸಂಸ್ಕೃತ ಭಾಷೆಯ ನುಡಿಗಟ್ಟು ಅದ್ಭುತ ಎಂದು ಹೇಳಿದವರಾರು?

**IV. ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ (3 x 2 = 6)**

11. ಇತಿಹಾಸದ ಪ್ರಮುಖ ಆಧಾರಗಳು ಯಾವುವು?
12. ಪ್ರಾಗೈತಿಹಾಸಿಕ ಕಾಲದ ಮೂರು ಹಂತಗಳಾವುವು?
13. ಭಾರತದಲ್ಲಿರುವ ನಾಲ್ಕು ವಿಶ್ವ ಪರಂಪರೆಯ ತಾಣಗಳನ್ನು ಹೆಸರಿಸಿ.

**V. ನಾಲ್ಕೈದು ವಾಕ್ಯಗಳಲ್ಲಿ ಉತ್ತರಿಸಿ (1 x 4 = 4)**

14. ಮಕ್ಕಳೇ, ನಮಗೆ ಇತಿಹಾಸ ಏಕೆ ಬೇಕು?

# ಉತ್ತರ ಪತ್ರಿಕೆ

---

1. ಆ. ಭಾರತೀಯರು

2. ಆ. ಹೆರೋಡೋಟಸ್

3. ಅ. ಭಾರತ

4. ಇ. ಏಕಕೋಶ ಜೀವಿಗಳು

5. ಪುರಾತತ್ವ ಆಧಾರಗಳು - ಇ. ಶಾಸನಗಳು

6. 21ನೇ ಶತಮಾನ - ಅ. ಸಾ.ಶ. 2001 ರಿಂದ 2100

7. ಬೆಂಕಿಯ ಪರಿಚಯ - ಈ. ಹಳೆಯ ಶಿಲಾಯುಗ

8. ಆಯುಧ ಉತ್ಪಾದನಾ ನೆಲೆ - ಆ. ಬಳ್ಳಾರಿ ಸಮೀಪದ ಸಂಗನಕಲ್ಲು

9. ಈ ಹಿಂದೆ ನಡೆದು ಹೋದ ಸಂಗತಿಗಳನ್ನು ಕ್ರಮಬದ್ಧವಾಗಿ ಹೇಳುವುದೇ ಇತಿಹಾಸ.

10. ವಿಲಿಯಂ ಜೋನ್ಸ್.

11. ಸಾಹಿತ್ಯ ಆಧಾರಗಳು, ಪುರಾತತ್ವ ಆಧಾರಗಳು.

12. ಹಳೆಯ ಶಿಲಾಯುಗ, ಮಧ್ಯ ಶಿಲಾಯುಗ, ನವ ಶಿಲಾಯುಗ.

13. ಹಂಪಿ, ಪಟ್ಟದಕಲ್ಲು, ಆಗ್ರಾದ ತಾಜಮಹಲ್, ಕೊನಾರ್ಕದ ಸೂರ್ಯ ದೇವಾಲಯ.

14. ಇತಿಹಾಸವು ನಮ್ಮ ದೇಶದ ಸ್ಮರಣ ಶಕ್ತಿಯಾಗಿದೆ. ಪೂರ್ವಿಕರು ಕೈಗೊಂಡ ಒಳ್ಳೆಯ ಮತ್ತು ತಪ್ಪು ತೀರ್ಮಾನಗಳಿಂದ ಅನುಭವಿಸಿದ ಸುಖ-ದುಃಖಗಳನ್ನು ತಿಳಿಸುತ್ತದೆ. ಮುಂದಿನ ತೀರ್ಮಾನಗಳನ್ನು ಕೈಗೊಳ್ಳುವಾಗ ಎಚ್ಚರಿಸುತ್ತದೆ. ಪೂರ್ವಿಕರ ತತ್ವಾದರ್ಶಗಳು ಮುಂದಿನ ತಲೆಮಾರುಗಳಿಗೆ ಮಾದರಿಯಾಗುತ್ತವೆ.

# ಪಾಠಾಧಾರಿತ(LBA) ಪ್ರಶ್ನೆ ಪತ್ರಿಕೆ 2026-27
## ಪಾಠ-: 3. ನಮ್ಮ ಹೆಮ್ಮೆಯ ಕರ್ನಾಟಕ

**ತರಗತಿ: 6ನೇ   ವಿಷಯ: ಸಮಾಜ ವಿಜ್ಞಾನ   ಅಂಕಗಳು : 20   ಸಮಯ : 45 ನಿಮಿಷ**

---

**I. ಸೂಕ್ತ ಉತ್ತರ ಆರಿಸಿ ಬರೆಯಿರಿ (4 x 1 = 4)**

1. ಕರ್ನಾಟಕದಲ್ಲಿ ವಿಸ್ತೀರ್ಣದಲ್ಲಿ ಅತಿ ದೊಡ್ಡ ಜಿಲ್ಲೆ ಯಾವುದು?
   ಅ. ಬೆಳಗಾವಿ  ಆ. ಬೆಂಗಳೂರು  ಇ. ಮೈಸೂರು  ಈ. ಧಾರವಾಡ
2. ಗಂಗರ ಮೊದಲ ರಾಜಧಾನಿ ಯಾವುದು?
   ಅ. ತಲಕಾಡು  ಆ. ಕೋಲಾರ  ಇ. ಮೈಸೂರು  ಈ. ಬಾದಾಮಿ
3. ಶರಾವತಿ ನದಿಯಿಂದ ನಿರ್ಮಾಣವಾದ ಜಲಪಾತ ಯಾವುದು?
   ಅ. ಗಗನಚುಕ್ಕಿ  ಆ. ಭರಚುಕ್ಕಿ  ಇ. ಜೋಗ್ ಜಲಪಾತ  ಈ. ಗೋಕಾಕ್
4. ಮೈಸೂರು ಒಡೆಯರ ರಾಜಧಾನಿ ಯಾವುದು?
   ಅ. ಶ್ರೀರಂಗಪಟ್ಟಣ  ಆ. ಮೈಸೂರು  ಇ. ಬೆಂಗಳೂರು  ಈ. ಚಿತ್ರದುರ್ಗ

**II. ಬಿಟ್ಟಸ್ಥಳ ತುಂಬಿರಿ / ಹೊಂದಿಸಿ ಬರೆಯಿರಿ (4 x 1 = 4)**

5. ಬನ್ನೇರುಘಟ್ಟ - ಅ. ಎಚ್. ಎಲ್. ನಾಗೇಗೌಡ
6. ಗುಡವಿ ಪಕ್ಷಿಧಾಮ - ಆ. ಕರ್ನಾಟಕ ಸರ್ಕಾರದ ನಾಟಕ ಸಂಸ್ಥೆ
7. ಜಾನಪದ ಲೋಕ - ಇ. ಬೆಂಗಳೂರು ನಗರ
8. ರಂಗಾಯಣ - ಈ. ಶಿವಮೊಗ್ಗ

**III. ಒಂದು ವಾಕ್ಯದಲ್ಲಿ ಉತ್ತರಿಸಿ (2 x 1 = 2)**

9. ಕರ್ನಾಟಕದ ಅತಿ ಎತ್ತರವಾದ ಪರ್ವತ ಶಿಖರ ಯಾವುದು?
10. ಕಾಡಾನೆಗಳನ್ನು ಪಳಗಿಸುವ ವಿಧಾನ ಯಾವುದು?

**IV. ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ (3 x 2 = 6)**

11. ಬೆಂಗಳೂರು ವಿಭಾಗದ ಜಿಲ್ಲೆಗಳನ್ನು ಹೆಸರಿಸಿ.
12. ಮೈಸೂರು ವಿಭಾಗವನ್ನು ಆಳಿದ ರಾಜಮನೆತನಗಳಾವುವು?
13. ಮೈಸೂರು ವಿಭಾಗದಲ್ಲಿ ಹರಿಯುವ ನದಿಗಳನ್ನು ಹೆಸರಿಸಿ.

**V. ನಾಲ್ಕೈದು ವಾಕ್ಯಗಳಲ್ಲಿ ಉತ್ತರಿಸಿ (1 x 4 = 4)**

14. ಬೆಳಗಾವಿ ವಿಭಾಗದ ಜ್ಞಾನಪೀಠ ಪುರಸ್ಕೃತರ ಹೆಸರನ್ನು ತಿಳಿಸಿ ಮತ್ತು ಅವರ ಯಾವ ಕೃತಿಗೆ ಜ್ಞಾನಪೀಠ ಪ್ರಶಸ್ತಿ ದೊರಕಿದೆ?.

# ಉತ್ತರ ಪತ್ರಿಕೆ

---

1. ಅ. ಬೆಳಗಾವಿ

2. ಆ. ಕೋಲಾರ

3. ಇ. ಜೋಗ್ ಜಲಪಾತ

4. ಆ. ಮೈಸೂರು

5. ಬನ್ನೇರುಘಟ್ಟ - ಇ. ಬೆಂಗಳೂರು ನಗರ

6. ಗುಡವಿ ಪಕ್ಷಿಧಾಮ - ಈ. ಶಿವಮೊಗ್ಗ

7. ಜಾನಪದ ಲೋಕ - ಅ. ಎಚ್. ಎಲ್. ನಾಗೇಗೌಡ

8. ರಂಗಾಯಣ - ಆ. ಕರ್ನಾಟಕ ಸರ್ಕಾರದ ನಾಟಕ ಸಂಸ್ಥೆ

9. ಮುಳ್ಳಯ್ಯನಗಿರಿ.

10. ಖೆಡ್ಡಾ ವಿಧಾನ.

11. ಬೆಂಗಳೂರು ನಗರ, ಬೆಂಗಳೂರು ಗ್ರಾಮೀಣ, ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ತುಮಕೂರು, ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ.

12. ಗಂಗರು, ಚೋಳರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಒಡೆಯರು, ಆಳುಪರು.

13. ಕಾವೇರಿ, ಹಾರಂಗಿ, ಹೇಮಾವತಿ, ಕಬಿನಿ.

14. ದ.ರಾ.ಬೇಂದ್ರೆ-ನಾಕುತಂತಿ ವಿ.ಕೃ.ಗೋಕಾಕ್-ಭಾರತ ಸಿಂಧೂ ರಶ್ಮಿ, ಗಿರೀಶ್ ಕಾರ್ನಾಡ್- ಸಮಗ್ರ ಸಾಹಿತ್ಯ, ಚಂದ್ರಶೇಖರ್ ಕಂಬಾರ-ಸಮಗ್ರ ಸಾಹಿತ್ಯ.

# ಪಾಠಾಧಾರಿತ(LBA) ಪ್ರಶ್ನೆ ಪತ್ರಿಕೆ 2026-27

## ಪಾಠ-: 4. ವೇದಕಾಲದ ಸಂಸ್ಕೃತಿ, 5. ಹೊಸ ಧರ್ಮಗಳ ಉದಯ

**ತರಗತಿ: 6ನೇ ವಿಷಯ: ಸಮಾಜ ವಿಜ್ಞಾನ ಅಂಕಗಳು : 20 ಸಮಯ : 45 ನಿಮಿಷ**

---

**I. ಸೂಕ್ತ ಉತ್ತರ ಆರಿಸಿ ಬರೆಯಿರಿ (4 x 1 = 4)**

1. ಬೌದ್ಧಧರ್ಮದ ಸ್ಥಾಪಕ ಯಾರು?
   ಅ. ಮಹಾವೀರ ಆ. ಗೌತಮ ಬುದ್ಧ ಇ. ಅಶೋಕ ಈ. ಕನಿಷ್ಕ
2. ಜೈನಧರ್ಮದ 24ನೇ ತೀರ್ಥಂಕರ ಯಾರು?
   ಅ. ವೃಷಭನಾಥ ಆ. ಪಾರ್ಶ್ವನಾಥ ಇ. ವರ್ಧಮಾನ ಮಹಾವೀರ ಈ. ಬುದ್ಧ
3. ಆರ್ಯರು ಎಲ್ಲಿಂದ ಬಂದವರು?
   ಅ. ಚೀನಾ ಆ. ಮಧ್ಯ ಏಷ್ಯಾ ಇ. ಯುರೋಪ್ ಈ. ಆಫ್ರಿಕಾ
4. ವೇದಗಳು ಎಷ್ಟು ಇವೆ?
   ಅ. 2 ಆ. 3 ಇ. 4 ಈ. 5

**II. ಬಿಟ್ಟಸ್ಥಳ ತುಂಬಿರಿ (4 x 1 = 4)**

5. ಘಗ್ಗರ್-ಹಕ್ರಾ ನದಿಯನ್ನು ಪ್ರಾಚೀನ ಕಾಲದಲ್ಲಿ ........ ಎಂದು ಕರೆಯುತ್ತಿದ್ದರು.
6. ಅತ್ಯಂತ ಪ್ರಾಚೀನ ವೇದ ........
7. ಗೌತಮ ಬುದ್ಧ ಜನಿಸಿದ ಸ್ಥಳ ........
8. ಜೈನ ಧರ್ಮದ ಮೊದಲ ತೀರ್ಥಂಕರ ........

**III. ಒಂದು ವಾಕ್ಯದಲ್ಲಿ ಉತ್ತರಿಸಿ (2 x 1 = 2)**

9. 'ಜಿನ' ಎಂಬ ಪದದ ಅರ್ಥವೇನು?
10. ವೇದಗಳು ಯಾವ ಭಾಷೆಯಲ್ಲಿವೆ?

**IV. ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ (3 x 2 = 6)**

11. ವೇದಗಳನ್ನು ಹೆಸರಿಸಿ.
12. ಬೌದ್ಧರ ಪವಿತ್ರ ಗ್ರಂಥಗಳಾದ ತ್ರಿಪಿಟಕಗಳು ಯಾವುವು?
13. ಜೈನ ಧರ್ಮದ ಪಂಥಗಳು ಯಾವುವು?

**V. ನಾಲ್ಕೈದು ವಾಕ್ಯಗಳಲ್ಲಿ ಉತ್ತರಿಸಿ (1 x 4 = 4)**

14. ಮಹಾವೀರನ ಬೋಧನೆಗಳನ್ನು ತಿಳಿಸಿ.

# ಉತ್ತರ ಪತ್ರಿಕೆ

---

1. ಆ. ಗೌತಮ ಬುದ್ಧ

2. ಇ. ವರ್ಧಮಾನ ಮಹಾವೀರ

3. ಆ. ಮಧ್ಯ ಏಷ್ಯಾ

4. ಇ. 4

5. ಸರಸ್ವತಿ ನದಿ

6. ಋಗ್ವೇದ

7. ನೇಪಾಳದ ಕಪಿಲವಸ್ತು ಸಮೀಪದ ಲುಂಬಿನಿ ವನ

8. ವೃಷಭನಾಥ

9. ಮೋಹವನ್ನು ಗೆದ್ದವನು.

10. ಸಂಸ್ಕೃತ.

11. ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣ ವೇದ.

12. ವಿನಯಪೀಟಕ, ಸುತ್ತಪೀಟಕ, ಅಭಿಧಮ್ಮಪೀಟಕ.

13. ಶ್ವೇತಾಂಬರ ಮತ್ತು ದಿಗಂಬರ.

14. 1. ಹಿಂಸೆ ಮಾಡದಿರುವುದು. 2. ಕಳ್ಳತನ ಮಾಡದಿರುವುದು. 3. ಸಂಪತ್ತಿನ ಸಂಗ್ರಹ ಮಾಡದಿರುವುದು. 4. ಸುಳ್ಳು ಹೇಳಬಾರದು. 5. ಬ್ರಹ್ಮಚರ್ಯ ಪಾಲನೆ.

# ಪಾಠಾಧಾರಿತ(LBA) ಪ್ರಶ್ನೆ ಪತ್ರಿಕೆ 2026-27

## ಪಾಠ-: 6. ದಕ್ಷಿಣ ಭಾರತದ ಪ್ರಾಚೀನ ರಾಜವಂಶಗಳು

**ತರಗತಿ: 6ನೇ ವಿಷಯ: ಸಮಾಜ ವಿಜ್ಞಾನ ಅಂಕಗಳು : 20 ಸಮಯ : 45 ನಿಮಿಷ**

---

**I. ಸೂಕ್ತ ಉತ್ತರ ಆರಿಸಿ ಬರೆಯಿರಿ (4 x 1 = 4)**

1. ಪಲ್ಲವರ ರಾಜಧಾನಿ ಕಂಚಿ ಈ ಕೆಳಗಿನ ರಾಜ್ಯದಲ್ಲಿದೆ.
   ಅ. ಕರ್ನಾಟಕ ಆ. ಮಹಾರಾಷ್ಟ್ರ ಇ. ತಮಿಳುನಾಡು ಈ. ಕೇರಳ
2. 'ಮಾನಸೋಲ್ಲಾಸ' ಕೃತಿ ಬರೆದವರು.
   ಅ. ಮುಮ್ಮಡಿ ಸೋಮೇಶ್ವರ ಆ. ಆರನೇ ವಿಕ್ರಮಾದಿತ್ಯ ಇ. ದುರ್ವಿನಿತ ಈ. ಅಮೋಘವರ್ಷ
3. ಹೊಯ್ಸಳರ ಕೊನೆಯ ರಾಜ.
   ಅ. ವಿಷ್ಣುವರ್ಧನ ಆ. ಮೂರನೇ ಬಲ್ಲಾಳ ಇ. ಮೂರನೇ ಗೋವಿಂದ ಈ. ಮೂರನೇ ಕೃಷ್ಣ
4. ಬೃಹದೇಶ್ವರ ದೇವಾಲಯದ ಕುರಿತು ಯಾವುದು ಸರಿ?
   ಅ. 13 ಅಂತಸ್ತು ಹೊಂದಿದೆ ಆ. ವಿಶ್ವ ಪರಂಪರೆ ತಾಣ ಇ. ಅತಿ ದೊಡ್ಡ ದೇವಾಲಯ ಈ. ಮೇಲಿನ ಎಲ್ಲವೂ ಸರಿ

**II. ಹೊಂದಿಸಿ ಬರೆಯಿರಿ (4 x 1 = 4)**

5. ಪಟ್ಟದಕಲ್ಲು - ಅ. ಆದಿಪುರಾಣ
6. ಪಂಪ - ಆ. ಗಿರಿಜಾ ಕಲ್ಯಾಣ
7. ವಿಷ್ಣುವರ್ಧನ - ಇ. ವಿಶ್ವಪರಂಪರೆ ತಾಣ
8. ಹರಿಹರ - ಈ. ಹೊಯ್ಸಳರ ಅರಸ

**III. ಒಂದು ವಾಕ್ಯದಲ್ಲಿ ಉತ್ತರಿಸಿ (2 x 1 = 2)**

9. ಶಾತವಾಹನರ ಆಡಳಿತ ಭಾಷೆ ಯಾವುದು?
10. ಕದಂಬರ ರಾಜಧಾನಿ ಯಾವುದು?

**IV. ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ (3 x 2 = 6)**

11. ನಿಗಮಗಳು ಎಂದರೇನು?
12. 'ಶ್ರೇಣಿ' ಎಂದರೇನು?
13. ಅಮೋಘವರ್ಷ ನೃಪತುಂಗನ ಸಾಧನೆಗಳನ್ನು ತಿಳಿಸಿ.

**V. ನಾಲ್ಕೈದು ವಾಕ್ಯಗಳಲ್ಲಿ ಉತ್ತರಿಸಿ (1 x 4 = 4)**

14. ಪಲ್ಲವರ ಕಾಲದ ಶಿಲ್ಪ ಕಲೆಯನ್ನು ವಿವರಿಸಿ.

# ಉತ್ತರ ಪತ್ರಿಕೆ

---

1. ಇ. ತಮಿಳುನಾಡು
2. ಅ. ಮುಮ್ಮಡಿ ಸೋಮೇಶ್ವರ
3. ಆ. ಮೂರನೇ ಬಲ್ಲಾಳ
4. ಈ. ಮೇಲಿನ ಎಲ್ಲವೂ ಸರಿ
5. ಪಟ್ಟದಕಲ್ಲು - ಇ. ವಿಶ್ವಪರಂಪರೆ ತಾಣ
6. ಪಂಪ - ಅ. ಆದಿಪುರಾಣ
7. ವಿಷ್ಣುವರ್ಧನ - ಈ. ಹೊಯ್ಸಳರ ಅರಸ
8. ಹರಿಹರ - ಆ. ಗಿರಿಜಾ ಕಲ್ಯಾಣ
9. ಪ್ರಾಕೃತ ಭಾಷೆ.
10. ಬನವಾಸಿ.
11. ಶಾತವಾಹನರ ಕಾಲದ ವ್ಯಾಪಾರಿ ಕೇಂದ್ರಗಳನ್ನು ನಿಗಮಗಳು ಎನ್ನುತ್ತಿದ್ದರು.
12. ವ್ಯಾಪಾರಿಗಳು ಮತ್ತು ವಿವಿಧ ಕಸಬುದಾರರು ತಮ್ಮ ಹಿತರಕ್ಷಣೆಗಾಗಿ ಕಟ್ಟಿಕೊಂಡ ಸಂಘಗಳನ್ನು ಶ್ರೇಣಿ ಎನ್ನುವರು.
13. 60 ವರ್ಷಗಳ ಕಾಲ ಆಳಿದನು, ವಿದ್ವಾಂಸನಾಗಿದ್ದನು, ಮಾನ್ಯಖೇಟ ಪಟ್ಟಣ ನಿರ್ಮಾಣ ಮಾಡಿದನು.
14. ಮಹಾಬಲಿಪುರಂನಲ್ಲಿ ಏಕಶಿಲಾರಥಗಳಿವೆ, ಗಂಗಾವತರಣ ಉಬ್ಬುಶಿಲ್ಪ, ಮಹಾಬಲಿಪುರದ ಶಿವದೇವಾಲಯ, ಕಂಚಿಯ ಕೈಲಾಸನಾಥ ಮತ್ತು ವೈಕುಂಠ ಪೆರುಮಾಳ ದೇವಾಲಯ ಪ್ರಸಿದ್ಧವಾಗಿವೆ.

# ಪಾಠಾಧಾರಿತ(LBA) ಪ್ರಶ್ನೆ ಪತ್ರಿಕೆ 2026-27

**ಪಾಠ-: 7. ಪೌರ ಮತ್ತು ಪೌರತ್ವ, 8. ನಮ್ಮ ಸಂವಿಧಾನ, 9. ಪ್ರಭುತ್ವದ ಪ್ರಕಾರಗಳು**

**ತರಗತಿ: 6ನೇ ವಿಷಯ: ಸಮಾಜ ವಿಜ್ಞಾನ ಅಂಕಗಳು : 20 ಸಮಯ : 45 ನಿಮಿಷ**

---

**I. ಸೂಕ್ತ ಉತ್ತರ ಆರಿಸಿ ಬರೆಯಿರಿ (4 x 1 = 4)**

1. ಸಂವಿಧಾನ ಜಾರಿಯಾದ ದಿನ...........

ಅ. ಜ. 26 1950 ಆ. ಆ. 15 1947 ಇ. ಜ. 25 1950 ಈ. ಜ. 24 1949

2. ಜಗತ್ತಿನ ಅತಿದೊಡ್ಡ ಪ್ರಜಾಪ್ರಭುತ್ವ ದೇಶ............

ಅ. ಭಾರತ ಆ. ಅಮೆರಿಕ ಇ. ರಷ್ಯಾ ಈ. ಫ್ರಾನ್ಸ್

3. ಪ್ರಜಾಪ್ರಭುತ್ವವೆಂದರೆ ಪ್ರಜೆಗಳಿಂದ ಪ್ರಜೆಗಳಿಗಾಗಿ. ಹೇಳಿಕೆ ನೀಡಿದವರು ಯಾರು?

ಅ. ಅಬ್ರಹಂ ಲಿಂಕನ್ ಆ. ಗಾಂಧೀಜಿ ಇ. ಕಾರ್ಲ್ ಮಾರ್ಕ್ಸ್ ಈ. ವಿಲಿಯಂ ಚರ್ಚಿಲ್

4. ಭಾರತವು ಅನುಸರಿಸುತ್ತಿರುವ ಸರ್ಕಾರದ ಪದ್ಧತಿ:............

ಅ. ಪ್ರಜಾಪ್ರಭುತ್ವ ಆ. ಸರ್ವಾಧಿಕಾರಿ ಇ. ಸಮತಾವಾದಿ ಈ. ಯಾವುದೂ ಅಲ್ಲ

**II. ಬಿಟ್ಟಸ್ಥಳ ತುಂಬಿರಿ / ಹೊಂದಿಸಿ ಬರೆಯಿರಿ (4 x 1 = 4)**

5. ಭಾರತ ಗಣರಾಜ್ಯದ ಪ್ರಥಮ ರಾಷ್ಟ್ರಾಧ್ಯಕ್ಷರು ........

6. ಜನವರಿ 26, 1950 ರಂದು ಸಂವಿಧಾನವು ಭಾರತವನ್ನು ........ ವೆಂದು ಘೋಷಣೆಮಾಡಿತು.

7. ಪೌರತ್ವವನ್ನು ಪಡೆಯುವ ವಿಧಾನಗಳು ........ ಮತ್ತು ........

8. ಮೂಲಭೂತ ಹಕ್ಕುಗಳನ್ನು ಕುರಿತ ಸಲಹಾಸಮಿತಿಯ ಅಧ್ಯಕ್ಷರು ........

**III. ಒಂದು ವಾಕ್ಯದಲ್ಲಿ ಉತ್ತರಿಸಿ (2 x 1 = 2)**

9. ಪೌರತ್ವ ಎಂದರೇನು?

10. ಗಣರಾಜ್ಯ ಎಂದರೇನು?

**IV. ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ (3 x 2 = 6)**

11. ಒಂದು ದೇಶದ ಪೌರತ್ವವನ್ನು ಪಡೆಯುವ ವಿಧಾನಗಳನ್ನು ಪಟ್ಟಿಮಾಡಿ.

12. ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿ ಎಂದರೇನು?

13. ಪ್ರಭುತ್ವದ ವಿಧಗಳು ಯಾವವು?

**V. ನಾಲ್ಕೈದು ವಾಕ್ಯಗಳಲ್ಲಿ ಉತ್ತರಿಸಿ (1 x 4 = 4)**

14. ಪೌರನ ಲಕ್ಷಣಗಳನ್ನು ಪಟ್ಟಿ ಮಾಡಿರಿ.

# ಉತ್ತರ ಪತ್ರಿಕೆ

---

1. ಅ. ಜ. 26 1950
2. ಅ. ಭಾರತ
3. ಅ. ಅಬ್ರಹಂ ಲಿಂಕನ್
4. ಅ. ಪ್ರಜಾಪ್ರಭುತ್ವ
5. ಡಾ. ಬಾಬು ರಾಜೇಂದ್ರ ಪ್ರಸಾದ್
6. ಗಣರಾಜ್ಯ
7. ಸಹಜ ಮತ್ತು ಸಹಜೀಕೃತ
8. ಸರ್ದಾರ್ ವಲ್ಲಭಭಾಯಿ ಪಟೇಲ್
9. ಒಂದು ದೇಶದ ಶಾಸನಾತ್ಮಕ ಸದಸ್ಯತ್ವವನ್ನು ಪೌರತ್ವ ಎನ್ನುತ್ತಾರೆ.
10. ರಾಜ್ಯದ ಅತ್ಯುನ್ನತ ಮುಖ್ಯಸ್ಥರು ಚುನಾಯಿತರಾಗಿರುವ ವ್ಯವಸ್ಥೆಯನ್ನು ಗಣರಾಜ್ಯ ಎನ್ನುವರು.
11. ಜನನದ ಮೂಲಕ, ನೋಂದಣಿ ಮೂಲಕ ಪೌರತ್ವವನ್ನು ಪಡೆಯಬಹುದು.
12. 18 ವರ್ಷ ಮೇಲ್ಪಟ್ಟ ಪ್ರಜೆಗಳು ಯಾವುದೇ ತಾರತಮ್ಯವಿಲ್ಲದೆ ಮತ ಚಲಾಯಿಸುವ ಹಕ್ಕನ್ನು ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿ ಎನ್ನುತ್ತಾರೆ.
13. ಪ್ರಜಾಪ್ರಭುತ್ವ, ಸರ್ವಾಧಿಕಾರಿ, ಸಮತಾವಾದಿ ಸರ್ಕಾರ.
14. 1) ಸಂವಿಧಾನ, ರಾಷ್ಟ್ರಧ್ವಜ ಗೌರವಿಸುವುದು 2) ರಾಷ್ಟ್ರೀಯ ಹಬ್ಬಗಳಲ್ಲಿ ಪಾಲ್ಗೊಳ್ಳುವುದು 3) ದೇಶದ ಕಾನೂನು ಪಾಲಿಸುವುದು 4) ಸಾರ್ವಜನಿಕ ಆಸ್ತಿ ರಕ್ಷಿಸುವುದು.

# ಪಾಠಾಧಾರಿತ(LBA) ಪ್ರಶ್ನೆ ಪತ್ರಿಕೆ 2026-27

## ಪಾಠ-: 10. ಗ್ಲೋಬ್ ಮತ್ತು ನಕಾಶೆಗಳು, 11. ಭೂಮಿಯ ಸ್ವರೂಪ

**ತರಗತಿ: 6ನೇ ವಿಷಯ: ಸಮಾಜ ವಿಜ್ಞಾನ    ಅಂಕಗಳು : 20    ಸಮಯ : 45 ನಿಮಿಷ**

---

**I. ಸೂಕ್ತ ಉತ್ತರ ಆರಿಸಿ ಬರೆಯಿರಿ (4 x 1 = 4)**

1. ಇದು ಭೂಮಿಯ ಪ್ರತಿರೂಪ....
   ಅ. ಗ್ಲೋಬ್  ಆ. ನಕಾಶೆ  ಇ. ಅಟ್ಲಾಸ್  ಈ. ನಕ್ಷೆಗಳು
2. ಪರ್ವತದ ಅತ್ಯಂತ ಎತ್ತರವುಳ್ಳ ತುದಿಗೆ ಹೀಗೆನ್ನುವರು
   ಅ. ಪರ್ವತಗಳು  ಆ. ಶಿಖರ  ಇ. ಪ್ರಸ್ಥಭೂಮಿ  ಈ. ಮೈದಾನಗಳು
3. ಪ್ರಪಂಚದ ಮೇಲ್ಛಾವಣಿ ಎಂದು ಕರೆಯುವ ಪ್ರಸ್ಥಭೂಮಿ ಯಾವುದು?
   ಅ. ದಖನ್  ಆ. ಬೊಲಿವಿಯಾ  ಇ. ಪಟಗೋನಿಯಾ  ಈ. ಟಿಬೆಟ್
4. ಹಗಲಿನ ವೇಳೆಯಲ್ಲಿ ಅತಿ ಶಾಖ ಮತ್ತು ರಾತ್ರಿ ವೇಳೆಯಲ್ಲಿ ಶೀತವಾಗಿರುವ ಭೂ ಭಾಗ ಯಾವುದು?
   ಅ. ಪರ್ವತ  ಆ. ಮರುಭೂಮಿ  ಇ. ಪ್ರಸ್ಥಭೂಮಿ  ಈ. ಮೈದಾನ

**II. ಹೊಂದಿಸಿ ಬರೆಯಿರಿ (4 x 1 = 4)**

5. ನೀಲಿ ಬಣ್ಣ  -  ಅ. ಮೈದಾನ ಮತ್ತು ತಗ್ಗು ಪ್ರದೇಶ
6. ಹಸಿರು ಬಣ್ಣ  -  ಆ. ಹಿಮದಿಂದ ಆವೃತವಾದ ಪ್ರದೇಶ
7. ಕಂದು ಬಣ್ಣ  -  ಇ. ಜಲಭಾಗಗಳು
8. ಬಿಳಿ ಬಣ್ಣ  -  ಈ. ಅತಿ ಎತ್ತರವಾದ ಪರ್ವತಗಳು

**III. ಒಂದು ವಾಕ್ಯದಲ್ಲಿ ಉತ್ತರಿಸಿ (2 x 1 = 2)**

9. ಗ್ಲೋಬ್ ಎಂದರೇನು?
10. ಪ್ರಪಂಚದ ಅತಿ ಎತ್ತರವಾದ ಶಿಖರ ಯಾವುದು?

**IV. ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ (3 x 2 = 6)**

11. ಉದ್ದೇಶ ಆಧಾರಿತ ನಕ್ಷೆಗಳ ವಿಧಗಳು ಯಾವುವು?
12. ಭೂ ಸ್ವರೂಪಗಳೆಂದರೇನು?
13. ದ್ವೀಪಗಳು ಎಂದರೇನು?

**V. ನಾಲ್ಕೈದು ವಾಕ್ಯಗಳಲ್ಲಿ ಉತ್ತರಿಸಿ (1 x 4 = 4)**

14. ಮರುಭೂಮಿಯ ಲಕ್ಷಣಗಳನ್ನು ಪಟ್ಟಿ ಮಾಡಿರಿ.

# ಉತ್ತರ ಪತ್ರಿಕೆ

---

1. ಅ. ಗ್ಲೋಬ್

2. ಆ. ಶಿಖರ

3. ಈ. ಟಿಬೆಟ್

4. ಆ. ಮರುಭೂಮಿ

5. ನೀಲಿ ಬಣ್ಣ - ಇ. ಜಲಭಾಗಗಳು

6. ಹಸಿರು ಬಣ್ಣ - ಅ. ಮೈದಾನ ಮತ್ತು ತಗ್ಗು ಪ್ರದೇಶ

7. ಕಂದು ಬಣ್ಣ - ಈ. ಅತಿ ಎತ್ತರವಾದ ಪರ್ವತಗಳು

8. ಬಿಳಿ ಬಣ್ಣ - ಆ. ಹಿಮದಿಂದ ಆವೃತವಾದ ಪ್ರದೇಶ

9. ಗ್ಲೋಬ್ ಎಂದರೆ ಭೂಮಿಯ ನೈಜ ಮಾದರಿ.

10. ಮೌಂಟ್ ಎವರೆಸ್ಟ್.

11. ಪ್ರಾಕೃತಿಕ ನಕ್ಷೆಗಳು, ರಾಜಕೀಯ ನಕ್ಷೆಗಳು, ಹಂಚಿಕೆ ನಕ್ಷೆಗಳು.

12. ಭೂಮಿಯ ಮೇಲಿನ ವಿವಿಧ ಮೇಲ್ಮೈ ಲಕ್ಷಣಗಳನ್ನು ಭೂಸ್ವರೂಪಗಳು ಎನ್ನುತ್ತಾರೆ.

13. ಸುತ್ತಲೂ ನೀರಿದ್ದು ಮಧ್ಯದಲ್ಲಿ ಭೂಭಾಗವಿರುವ ಪ್ರದೇಶವನ್ನು ದ್ವೀಪ ಎನ್ನುತ್ತಾರೆ.

14. 1) ಹಗಲಿನಲ್ಲಿ ಅತಿ ಶಾಖ, ರಾತ್ರಿಯಲ್ಲಿ ಅತಿ ಚಳಿ ಇರುತ್ತದೆ. 2) ಕನಿಷ್ಠ ಪ್ರಮಾಣದ ಮಳೆ ಬೀಳುತ್ತದೆ. 3) ನೀರಿನ ಅಭಾವವಿರುತ್ತದೆ 4) ವಿರಳವಾದ ಸಸ್ಯವರ್ಗ ಮತ್ತು ಪ್ರಾಣಿಸಂಕುಲ ಇರುತ್ತದೆ.

# ಕೊಡುಗೆ:

## ಜಿಪಿಟಿ ಶಿಕ್ಷಕರ ಶೈಕ್ಷಣಿಕ ಸಂಪನ್ಮೂಲಗಳು,ಉತ್ತರ ಕನ್ನಡ

( https://chandugokarna-bit.github.io/gpt-teachers-resources/# )